(47) (115)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಚರ್ಮ ಕುಶಲಕರ್ಮಿಗಳಿಗೆ ಡಾ|| ಬಾಬು ಜಗಜೀವನ ರಾಂ ವಸತಿ ಕಾರ್ಯಾಗಾರ ನಿರ್ಮಾಣ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರ ಪ್ರಸ್ತಾವನೆ ದಿನಾಂಕ: 07-01-2015 ಮತ್ತು 13-05-2015

*****

ಪ್ರಸ್ತಾವನೆ:-

ಮೇಲೆ ಓದಲಾದ ದಿನಾಂಕ: 07-01-2015 ಮತ್ತು 13.05.2015ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರು ಸದರಿ ನಿಗಮದ ವತಿಯಿಂದ ರಾಜ್ಯದ ಚರ್ಮ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಯೋಜನೆಯ ಘಟಕದ ವೆಚ್ಚದ ವಿವರಗಳು ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ವಿವರ | ಮೊತ್ತ ರೂ.ಗಳಲ್ಲಿ |
|---|---|---|
| 1 | ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ ಯಿಂದ ಒದಗಿಸಲು ಪ್ರಸ್ತಾಪಿಸಿರುವ ಸಹಾಯಧನ | 2,20,000-00 |
| 2 | ಚರ್ಮ ಕುಶಲಕರ್ಮಿಗಳಿಂದ ಸಂಗ್ರಹಿಸಲು ಪ್ರಸ್ತಾಪಿಸಿರುವ ವಂತಿಕೆ ಹಣ | 30,000-00 |
| | ಒಟ್ಟು | 2,50,000-00 |

(ಎರಡು ಲಕ್ಷ ಐವತ್ತು ಸಾವಿರ ರೂಪಾಯಿಗಳು ಮಾತ್ರ)

ಈ ಯೋಜನೆಯನ್ನು "ಡಾ:ಬಾಬು ಜಗಜೀವನ ರಾಂ ವಸತಿ ಕಾರ್ಯಾಗಾರ ನಿರ್ಮಾಣ ಯೋಜನೆ" ಎಂದು ಹೆಸರಿಡಲು ಮತ್ತು ಅರ್ಹ ಫಲಾನುಭವಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲು ಇತ್ಯಾಧಿಗಳ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಯೋಜನೆಯನ್ನು ನಿಗಮದ 2015-16ನೇ ಸಾಲಿನ ಕ್ರಿಯಾ ಯೋಜನೆಯಲ್ಲಿಯೂ ಸಹ ಸೇರಿಸಲಾಗಿದೆ.

ಸದರಿ ಯೋಜನೆಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಸಹ ದಿನಾಂಕ 26.05.2015 ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳು / ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ ಹೆಚ್ಚುವರಿಯಾಗಿ ರೂ. 10.00 ಕೋಟಿಗಳನ್ನು ಒದಗಿಸಲಾಗಿದೆ. ಅದರಂತೆ ದಿನಾಂಕ 23.07.2015 ರಂದು ಸರ್ಕಾರಿ ಆದೇಶ ಸಂಖ್ಯೆ:ಸಕಇ 284 ಎಸ್‌ಎಲ್‌ಪಿ 2015ರಲ್ಲಿ ಹೊರಡಿಸಲಾಗಿದೆ.

---2)

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 37 ಎಸ್‌ಎಲ್‌ಪಿ 2015,**
**ಬೆಂಗಳೂರು, ದಿನಾಂಕ: 09.09.2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2015-16ನೇ ಸಾಲಿನಲ್ಲಿ ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ವತಿಯಿಂದ ರಾಜ್ಯದ ಚರ್ಮ ಕುಶಲಕರ್ಮಿಗಳಿಗೆ ಡಾ|| ಬಾಬು ಜಗಜೀವನ ರಾಂ ವಸತಿ ಕಾರ್ಯಾಗಾರ ನಿರ್ಮಾಣ ಯೋಜನೆಗೆ ಈ ಕೆಳಕಂಡ ಷರತ್ತುಗಳಿಗೊಳ್ಳಪಟ್ಟು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

1. **ಯೋಜನೆಯ ಹೆಸರು ಮತ್ತು ಉದ್ದೇಶಗಳು:**

   **ಡಾ: ಬಾಬು ಜಗಜೀವನ ರಾಂ ವಸತಿ ಕಾರ್ಯಾಗಾರ ನಿರ್ಮಾಣ ಯೋಜನೆ**

   - ನಿವೇಶನ ರಹಿತ ಮತ್ತು ವಸತಿ ರಹಿತ ಚರ್ಮಕೈಗಾರಿಕೆಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿಯ ಕುಶಲಕರ್ಮಿಗಳಿಗೆ ಗುಂಪು ವಸತಿ ಕಾರ್ಯಾಗಾರಗಳನ್ನು ನಿರ್ಮಾಣ ಮಾಡಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
   - ನಿವೇಶನ ಹೊಂದಿರುವ ಮತ್ತು ಗುಡಿಸಲು / ಶಿಥಿಲಗೊಂಡ ಮನೆಯನ್ನು ಹೊಂದಿರುವ ವೃತ್ತಿ ನಿರತ ಚರ್ಮಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರ ಒದಗಿಸುವುದು.

2. **ಪ್ರತಿ ವಸತಿ ಕಾರ್ಯಾಗಾರದ ನಿರ್ಮಾಣದ ಘಟಕ ವೆಚ್ಚ: ರೂ.2.50 ಲಕ್ಷ (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)**

| | | |
|---|---|---|
| ಅ | ಪ್ರತಿ ವಸತಿ ಕಾರ್ಯಾಗಾರಕ್ಕೆ ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ನೀಡುವ ಸಹಾಯ ಧನ ಮೊತ್ತ | ರೂ.2.20,000.00 |
| ಆ | ಚರ್ಮಕುಶಲಕರ್ಮಿಗಳ ವಂತಿಕೆ ಮೊತ್ತ | ರೂ.30,000.00 |
| | ***ಒಟ್ಟು ಮೊತ್ತ*** | ***ರೂ.2,50,000.00*** |

3. **ಗುಂಪು ವಸತಿ ಕಾರ್ಯಾಗಾರಗಳನ್ನು / ವೈಯಕ್ತಿಕ ವಸತಿ ಕಾರ್ಯಾಗಾರಗಳನ್ನು ಪಡೆಯಲು ಕುಶಲಕರ್ಮಿಗಳ ಅರ್ಹತೆ:**

   - ನಿಗಮದಲ್ಲಿ ಚರ್ಮಕುಶಲಕರ್ಮಿಯೆಂದು ನೊಂದಾಯಿಸಿರಬೇಕು.
   - ನೊಂದಾಯಿಸದೇ ಇದ್ದಲ್ಲಿ ಚಾಲ್ತಿಯಲ್ಲಿರುವ ಪದ್ಧತಿಯಂತೆ ನೋಂದಾಯಿಸಿಕೊಳ್ಳಬೇಕು ಅಥವಾ ಚರ್ಮಗಾರಿಕೆ ವೃತ್ತಿಯಲ್ಲಿ ಇರುವುದಾಗಿ ಗ್ರಾಮ ಪಂಚಾಯತಿ/ಪಟ್ಟಣ ಪಂಚಾಯತಿ ಆದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಿಂದ, ನಗರದಲ್ಲಾದರೆ ಪುರಸಭೆ ಮುಖ್ಯಾಧಿಕಾರಿಗಳಿಂದ, ನಗರಸಭೆ ಆಯುಕ್ತರಿಂದ, ಪಾಲಿಕೆಯಾದಲ್ಲಿ ಆಯುಕ್ತರು ಅಥವಾ ಜಂಟಿ ಆಯುಕ್ತರು

46 118

ಅಥವಾ ಉಪ ಆಯುಕ್ತರಿಂದ ವೃತ್ತಿ ಪ್ರಮಾಣ ಪತ್ರವನ್ನು ಮತ್ತು ವಸತಿ ರಹಿತರೆಂದು ಪ್ರಮಾಣ ಪತ್ರ ಪಡೆದಿರಬೇಕು.

- ಕುಶಲಕರ್ಮಿಗಳ ಆದಾಯ ಗ್ರಾಮೀಣ ಪ್ರದೇಶದಲ್ಲಾದರೆ ರೂ. 32,000/- ಮತ್ತು ನಗರ ಪ್ರದೇಶದಲ್ಲಾದರೆ ರೂ. 87,600/- ರ ಒಳಗಿರಬೇಕು. ಆದಾಯ ಪ್ರಮಾಣ ಪತ್ರವನ್ನು ಪಡೆದಿರಬೇಕು.
- ಚರ್ಮಕುಶಲಕರ್ಮಿಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿರುವುದರಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದಿರಬೇಕು.
- ವಸತಿ ಕಾರ್ಯಾಗಾರ ನಿರ್ಮಾಣ ಯೋಜನೆಗೆ ನಿಗಮವು ನಿಗದಿಪಡಿಸಿದ ಅರ್ಜಿ ಸಲ್ಲಿಸತಕ್ಕದ್ದು.
- ವಯ್ಯುಕ್ತಿಕ ವಸತಿ ಕಾರ್ಯಾಗಾರಕ್ಕೆ ಅರ್ಜಿ ಸಲ್ಲಿಸಿದಲ್ಲಿ ನಿವೇಶನ ಇರುವ ಬಗ್ಗೆ ದಾಖಲೆ ಅಥವಾ ಗುಡಿಸಲು/ಶಿಥಿಲಗೊಂಡ ಮನೆ ಇದ್ದಲ್ಲಿ ಪೋಟೋ ಮತ್ತು ನಿವೇಶನದ ದಾಖಲೆಗಳನ್ನು ಸಲ್ಲಿಸಬೇಕು.

**4. ಫಲಾನುಭವಿಗಳ ಆಯ್ಕೆ ವಿಧಾನ :**

- ನಿಗಮದಿಂದ ನಿಗದಿತ ಅರ್ಜಿಗಳನ್ನು ಮುದ್ರಿಸಿ ಈ ಬಗ್ಗೆ ವ್ಯಾಪಕ ಪ್ರಚಾರ ನೀಡಿ ಅರ್ಜಿಗಳನ್ನು ಆಹ್ವಾನಿಸುವುದು ಮತ್ತು ತಾಲ್ಲೂಕು ಮಟ್ಟದಲ್ಲಿ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಯಲ್ಲಿ ಅರ್ಜಿಗಳು ದೊರೆಯುವಂತೆ ವ್ಯವಸ್ಥೆ ಮಾಡುವುದು.
- ಫಲಾನುಭವಿ ಕುಶಲಕರ್ಮಿಗಳು ತುಂಬಿದ ಅರ್ಜಿಗಳನ್ನು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಗೆ ಸಲ್ಲಿಸುವುದು.
- ಅರ್ಜಿಗಳನ್ನು ಸಲ್ಲಿಸಿದ ನಂತರ ಆಡಕರ್ ಜಿಲ್ಲಾ ಸಂಯೋಜಕರು ಎಲ್ಲಾ ತಾಲ್ಲೂಕುಗಳಿಂದ ಅರ್ಜಿಗಳನ್ನು ಕ್ರೂಡೀಕರಿಸಿ ಜಿಲ್ಲಾಮಟ್ಟದ ಪರಿಶೀಲನಾ ಸಮಿತಿ ಮುಂದೆ ಮಂಡಿಸಬೇಕು.

<u>ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಕೆಳಕಂಡಂತಿರುತ್ತದೆ.</u>

| | |
|---|---|
| ಅ. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು | - ಅಧ್ಯಕ್ಷರು |
| ಆ ಸಂಬಂಧಿಸಿದ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು | - ಸದಸ್ಯರು |
| ಇ. ಆಡಕರ್ ಜಿಲ್ಲಾ ಸಂಯೋಜಕರು | - ಸದಸ್ಯ ಕಾರ್ಯದರ್ಶಿಗಳು |

- ಸದರಿ ಸಮಿತಿಯಿಂದ ಫಲಾನುಭವಿಗಳ ಅರ್ಹತೆ ಬಗ್ಗೆ ಪರಿಶೀಲಿಸಿದ ನಂತರ ಅರ್ಹ ಕುಶಲಕರ್ಮಿ ಫಲಾನುಭವಿಗಳ ಪಟ್ಟಿಯನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಗೆ ಆಯ್ಕೆ ಮಾಡಲು ಮಂಡಿಸತಕ್ಕದ್ದು.

**ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಕೆಳಕಂಡಂತಿರುತ್ತದೆ.**

ಅ. ಜಿಲ್ಲಾಧಿಕಾರಿಗಳು – ಅಧ್ಯಕ್ಷರು

ಆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು – ಉಪಾಧ್ಯಕ್ಷರು

ಇ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು– ಸದಸ್ಯರು

ಈ. ಕಾರ್ಯ ನಿರ್ವಾಹಕ ಅಭಿಯಂತರರು ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ– ಸದಸ್ಯರು

ಉ. ಆಡಕರ್ ಜಿಲ್ಲಾ ಸಂಯೋಜಕರು – ಸದಸ್ಯ ಕಾರ್ಯದರ್ಶಿಗಳು

**<u>ಜಿಲ್ಲಾ ಆಯ್ಕೆ ಸಮಿತಿಯ ಕಾರ್ಯಗಳು</u> :**

**ಅ. ಫಲಾನುಭವಿಗಳನ್ನು ಆಯ್ಕೆ ಮಾಡುವುದು.**

**ಆ. ಆಯ್ಕೆ ಪಟ್ಟಿಯನ್ನು ಆಡಕರ್ ಜಿಲ್ಲಾ ಸಂಯೋಜಕರ ಮೂಲಕ ಆಡಕರ್ ನಿಗಮಕ್ಕೆ ಕಳುಹಿಸುವುದು.**

**ಇ. ವಸತಿ ಕಾರ್ಯಾಗಾರ ಮಂಜೂರು ಮಾಡಿದ ನಂತರ ನಿರ್ಮಾಣ ಉಸ್ತುವಾರಿ ನೋಡಿಕೊಳ್ಳುವುದು.**

5. <u>ಯೋಜನಾ ಅನುಷ್ಠಾನ:</u>

<u>ವೈಯಕ್ತಿಕ ವಸತಿ ಕಾರ್ಯಾಗಾರ ನಿರ್ಮಾಣ</u>

- ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ವೈಯಕ್ತಿಕ ವಸತಿ ಕಾರ್ಯಾಗಾರಗಳ ನಿರ್ಮಾಣವನ್ನು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ವಹಿಸಿ ಅದಕ್ಕೆ ತಗಲುವ ವೆಚ್ಚವನ್ನು ಆಡ್‌ಕರ್ ನಿಗಮದಿಂದ ಕಂತುಗಳಲ್ಲಿ ಬಿಡುಗಡೆ ಮಾಡುವುದು.
- ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದವರು ವಯ್ಯುಕ್ತಿಕ ವಸತಿ ಕಾರ್ಯಾಗಾರಗಳಿಗೆ ಸಂಬಂಧಿಸಿದಂತೆ ಜಿ.ಪಿ.ಎಸ್. ಪ್ರಗತಿಗೆ ಅನುಸಾರವಾಗಿ ನಾಲ್ಕು ಹಂತಗಳಲ್ಲಿ ಅಂದರೆ ತಳಪಾಯ, ಗೋಡೆ/ ಲಿಂಟಲ್, ಛಾವಣಿ ಹಾಗೂ ಪೂರ್ಣಗೊಂಡ ಹಂತಗಳಲ್ಲಿ ಸಹಾಯ ಧನ ರೂ. 2.20 ಲಕ್ಷಗಳನ್ನು ಕುಶಲಕರ್ಮಿಗಳ ಖಾತೆಗೆ ಬಿಡುಗಡೆ ಮಾಡುವುದು.
- ವೈಯಕ್ತಿಕ ವಸತಿ ಕಾರ್ಯಾಗಾರ ಫಲಾನುಭವಿಗಳು ರೂ. 30,000/- ವಂತಿಕೆಯನ್ನು ಲೇಬರ್ ರೂಪದಲ್ಲಾಗಲಿ ಅಥವಾ ಮೆಟಿರಿಯಲ್ ರೂಪದಲ್ಲಾಗಲಿ ಭರಿಸುವುದು ಅಥವಾ ಡಿಡಿ ರೂಪದಲ್ಲಿ ನಿಗಮಕ್ಕೆ ಪಾವತಿ ಮಾಡುವುದು.
- ವಸತಿ ಕಾರ್ಯಾಗಾರಗಳಿಗೆ ಬಿಡುಗಡೆ ಮಾಡಿದ ಅನುದಾನದ ಯುಟಿಲೈಸೇಷನ್ ಸರ್ಟಿಫಿಕೇಟನ್ನು ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮದವರು ಆಡಕರ್ ನಿಗಮಕ್ಕೆ ನೀಡತಕ್ಕದ್ದು.
- ವೈಯಕ್ತಿಕ ವಸತಿ ಕಾರ್ಯಾಗಾರದ ಫಲಾನುಭವಿಗಳು ಹೆಚ್ಚುವರಿಯಾಗಿ ವಸತಿ ಕಾರ್ಯಾಗಾರವನ್ನು ನಿರ್ಮಾಣ ಮಾಡಲು ಬಯಸಿದಲ್ಲಿ ಹೆಚ್ಚುವರಿ ನಿರ್ಮಾಣದ

ವೆಚ್ಚವನ್ನು ಫಲಾನುಭವಿಗಳೇ ಭರಿಸತಕ್ಕದ್ದು. ನಿರ್ಮಾಣ ಗೊಂಡ ವಸತಿ ಕಾರ್ಯಾಗಾರದ ವೆಚ್ಚವು ನಿಗಮ ನೀಡುವ ಸಹಾಯ ಧನದ ಜೊತೆಗೆ ಫಲಾನುಭವಿ ವಂತಿಗೆ ಒಳಗೊಂಡಂತೆ ಸಹಾಯಧನದ ನಾಲ್ಕು ಪಟ್ಟು ಮೀರಿರಬಾರದು.

<u>ಗುಂಪು ವಸತಿ ಕಾರ್ಯಾಗಾರ ನಿರ್ಮಾಣ</u>:

- ಗುಂಪು ವಸತಿ ಕಾರ್ಯಾಗಾರಕ್ಕೆ ಆಯ್ಕೆಯಾದ ಫಲಾನುಭವಿಗಳು ವಂತಿಕೆ ಹಣ ರೂ. 30,000/- ಗಳನ್ನು ಡಿ.ಡಿ. ರೂಪದಲ್ಲಿ ಆಡಕರ್ ನಿಗಮಕ್ಕೆ ಜಮಾ ಮಾಡಬೇಕು.
- ಆಡಕರ್ ನಿಗಮವು ಒದಗಿಸುವ ಗುಂಪು ವಸತಿ/ ಬಹುಮಹಡಿ ಕಟ್ಟಡದ ಕಾರ್ಯಾಗಾರ ನಕ್ಷೆ ಮತ್ತು ಅಂಧಾಜು ಪಟ್ಟಿಯಂತೆ ವಸತಿ ಕಾರ್ಯಾಗಾರಗಳನ್ನು ನಿರ್ಮಾಣ ಮಾಡಲು ರೂ. 2.50 ಲಕ್ಷ ಹಣವನ್ನು ಆಡಕರ್ ನಿಗಮವು ಹಂತ ಹಂತವಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವುದು.
- ಜಿಲ್ಲಾಧಿಕಾರಿಗಳು ಕೆ.ಟಿ.ಪಿ.ಪಿ. ಕಾಯ್ಕೆ ಪ್ರಕಾರ ಟೆಂಡರ್ ಕರೆಯುವುದಾಗಲಿ ಅಥವಾ ಕೆ.ಟಿ.ಪಿ.ಪಿ. ಕಾಯ್ದೆ ಅಡಿ ವಿನಾಯಿತಿ ಹೊಂದಿರುವ ಸೂಕ್ತ ಏಜೆನ್ಸಿಗಳಿಗೆ ವಸತಿ ಕಾರ್ಯಗಾರ ನಿರ್ಮಾಣ ಕಾರ್ಯವನ್ನು ವಹಿಸುವುದು.
- ಗುಂಪು ವಸತಿಗೆ / ಬಹುಮಹಡಿ ವಸತಿಗಳಿಗೆ ಅಗತ್ಯವಿರುವ ಜಮೀನನ್ನು ಜಿಲ್ಲಾಮಟ್ಟದ ಆಯ್ಕೆ ಸಮಿತಿಯ ಶಿಫಾರಸ್ಸು ಮೇರೆಗೆ ಆಡಕರ್ ನಿಗಮವು ಸಂಸ್ಥೆಯ ಹೆಸರಿಗೆ ಖರೀದಿ ಮಾಡುವುದು.
- ಸರ್ಕಾರಿ ಜಮೀನು ಆಗಿದ್ದಲ್ಲಿ ಗುಂಪು / ಬಹುಮಹಡಿ ವಸತಿ ನಿರ್ಮಾಣಕ್ಕಾಗಿ ಬಳಸಲು ಆಡಕರ್ ನಿಗಮದ ಹೆಸರಿಗೆ ಮಂಜೂರು ಮಾಡುವುದು/ ಮಾಡಿಸಿಕೊಳ್ಳುವುದು.
- ಇಂತಹ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಜಿಲ್ಲಾಧಿಕಾರಿಗಳು / ಸ್ಥಳೀಯ ಸಂಸ್ಥೆಗಳು/ ಜಿಲ್ಲಾ ಪಂಚಾಯತ್/ಆಡಕರ್ ನಿಗಮದಿಂದ ಒದಗಿಸುವುದು.
- ಆಡಕರ್ ನಿಗಮದಲ್ಲಿ ಹೆಚ್ಚಿನ ಜಮೀನು (ಸರ್‌ಪ್ಲಸ್ ಲ್ಯಾಂಡ್) ಲಭ್ಯವಿದ್ದಲ್ಲಿ ಅದರಲ್ಲೂ ಸಹ ಬಹುಮಹಡಿ ವಸತಿ ಕಾರ್ಯಾಗಾರಗಳನ್ನು ನಿಗಮದ ಮಂಡಳಿ ಅನುಮತಿ ಮೇರೆಗೆ ಮೇಲಿನಂತೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಲು ಮಾತ್ರ ಜಿಲ್ಲಾಧಿಕಾರಿಗಳಿಗೆ ವಹಿಸುವುದು. ಆದರೆ ಜಮೀನು ನಿಗಮದ ಹೆಸರಿನಲ್ಲಿಯೇ ಮುಂದುವರೆಯುತ್ತದೆ.
- ಆಯ್ಕೆಯಾದ ಅರ್ಹ ಫಲಾನುಭವಿಗಳು ಒಟ್ಟಾಗಿ ಸೇರಿ ನಿವೇಶನ ಹೊಂದಿದಲ್ಲಿ ಅಲ್ಲಿಯೂ ಕೂಡ ವೈಯಕ್ತಿಕ ಎಂದು ಪರಿಗಣಿಸಿ ಬಹುಮಹಡಿ ಅಥವಾ ವೈಯಕ್ತಿಕ ವಸತಿ ಕಾರ್ಯಾಗಾರಗಳನ್ನು ಮೇಲಿನ ಪದ್ಧತಿ ಅನುಸರಿಸಿ ನಿರ್ಮಿಸಿಕೊಡಬಹುದು.
- ವಸತಿ ಕಾರ್ಯಾಗಾರಗಳ ನಿರ್ಮಾಣದಲ್ಲಿ ಗುಣಮಟ್ಟವನ್ನು ಕಾಪಾಡತಕ್ಕದ್ದು. Third Party Inspectionಗೆ ವ್ಯವಸ್ಥೆ ಮಾಡತಕ್ಕದ್ದು. ಇದಕ್ಕೆ ತಗಲುವ ವೆಚ್ಚವನ್ನು ಆಡಕರ್ ನಿಗಮದಿಂದ ಭರಿಸತಕ್ಕದ್ದು.

6. ವಸತಿ ಕಾರ್ಯಾಗಾರದ ವಿಸ್ತೀರ್ಣ ಮತ್ತು ವಿನ್ಯಾಸವನ್ನು ಆಡಕರ್ ನಿಗಮವು ಘಟಕ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ತಯಾರಿಸಿ ಜಿಲ್ಲಾ ಮಟ್ಟದ ಸಮಿತಿಗೆ ಕೊಡಬೇಕು.

   - ನಿರ್ಮಿಸುವ ವಸತಿ ಕಾರ್ಯಾಗಾರ ಕಟ್ಟಡದಲ್ಲಿ ವಾಸಿಸಲು ಹಾಲ್, ಮಲಗುವ ಕೋಣೆ ಕೆಲಸ ನಿರ್ವಹಿಸಲು ಕಾರ್ಯಾಗಾರ, ಅಡಿಗೆ ಕೋಣೆ, ಸ್ನಾನಗೃಹ ಹಾಗೂ ಶೌಚಾಲಯ ಹೊಂದಿಕೊಂಡಂತೆ ನಿರ್ಮಿಸುವುದು.

7. ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ನಿರ್ಮಾಣವಾದ ಗುಂಪು ವಸತಿ ಕಾರ್ಯಾಗಾರಗಳು / ಬಹುಮಹಡಿ ವಸತಿ ಕಾರ್ಯಾಗಾರಗಳನ್ನು ಆಡಕರ್ ನಿಗಮದ ವಶಕ್ಕೆ ನೀಡುವುದು. ಆಡಕರ್ ನಿಗಮವು 99 ವರ್ಷಗಳ ಅವಧಿಗೆ ಲೀಸ್ ಆಧಾರದ ಮೇಲೆ ಆಯ್ಕೆಯಾದ ಚರ್ಮ ಕುಶಲಕರ್ಮಿಗಳಿಗೆ ಹಂಚಿಕೆ ಮಾಡತಕ್ಕದ್ದು.
8. ಫಲಾನುಭವಿಯು ಪುರುಷನಾದಲ್ಲಿ ವಸತಿ ಕಾರ್ಯಾಗಾರವನ್ನು ಆತನ ಪತ್ನಿ ಹೆಸರಿಗೆ ಮಂಜೂರು/ಹಂಚಿಕೆ ಮಾಡತಕ್ಕದ್ದು. ಫಲಾನುಭವಿಯು ವಿದುರನಾದ ಪಕ್ಷದಲ್ಲಿ ಮಾತ್ರ ಮಂಜೂರು / ಹಂಚಿಕೆ ಪತ್ರವನ್ನು ಆತನ ಹೆಸರಿಗೆ ನೀಡುವುದು.

ಸದರಿ ನಿಗಮದಲ್ಲಿ ಈಗಾಗಲೇ ಲಭ್ಯವಿರುವ ಅನುದಾನದ ಜೊತೆಗೆ 2015-16 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ವಸತಿ ಕಾರ್ಯಾಗಾರ ಯೋಜನೆಗೆ ಹೆಚ್ಚಿನ ಅನುದಾನ ಒದಗಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ (ವೆಚ್ಚ 3 & 9)ರವರ ಟಿಪ್ಪಣಿ ಸಂಖ್ಯೆ: ಆಇ 536 ವೆಚ್ಚ-3/2015, ದಿನಾಂಕ: 22-06-2015ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

10/9/2015
(ಗಿರಿಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

<u>ಗೆ:-</u>

1) ಮಹಾಲೇಖಪಾಲರು, (ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
4) ಎಲ್ಲಾ ಜಿಲ್ಲಾಧಿಕಾರಿಗಳಿಗೆ
5) ಎಲ್ಲಾ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ } ಡಾ. ಬಾಬು ಜಗಜೀವನ ಚರ್ಮ ಕೈ. ನಿ. [illegible]
6) ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ
7) ಸರ್ಕಾರದ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
8) ಸರ್ಕಾರದ ಉಪ ಕಾರ್ಯದರ್ಶಿ-1 ರವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
9) ಸರ್ಕಾರದ ಅಧೀನ ಕಾರ್ಯದರ್ಶಿ-2 & 3, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು
10) ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-3 & 9), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು

[illegible] ಕಡತ/ಹೆಚುವರಿ ಪ್ರತಿ.